ದಿನಾಂಕ 13 ನೇ ಜನವರಿ 2022 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ : ವಾದಿಪರ ಶ್ರೀ ಎಸ್ ವಿ ಎಸ್ ವಕೀಲರಿಂದಃ-

ರಾಷ್ಟ್ರೀಯ ಗ್ರಾಮೀಣ ಉದ್ಯೋಗ್ಯ ಖಾತ್ರಿ ಅಧಿನಿಯಮ 2005 ರಡಿ ಕೆಲಸಕ್ಕೆ ವರದಿ ಮಾಡಿಕೊಳ್ಳುವುದಕ್ಕಾಗಿ ನೀಡಿರುವ ನೊಟೀಸ್ ನ ಧೃಡೀಕೃತ ನಕಲುಗಳನ್ನು ನಿ ಪಿ 34 ಮತ್ತು 35 ಎಂದು, ಸದರಿ ಅಧಿನಿಯಮದಡಿ ಕೆಲಸಕ್ಕಾಗಿ ಸಲ್ಲಿಸಿರುವ ಅರ್ಜಿಯ ಧೃಡೀಕೃತ ನಕಲನ್ನು ನಿ ಪಿ 36 ಎಂದು, ಸದರಿ ಅಧಿನಿಯಮದಡಿ ಕೆಲಸ ನಿರ್ವಹಿಸಿದ ಕೆಲಸಗಾರರ ಪಟ್ಟಿಯ ಧೃಡೀಕೃತ ನಕಲನ್ನು ನಿ ಪಿ 37 ಎಂದು, ಬಿಲ್ ಸಪ್ಲೈ ಫಾರಮ್ ನ ಧೃಡೀಕೃತ ನಕಲನ್ನು ನಿ ಪಿ 38 ಎಂದು, ಪಂಚಾಯತ್ ರಾಜ್ ಇಂಜಿನಿಯರಿಂಗ್ ರವರು ಮಾಯಾಮುಡಿ ಗ್ರಾಮ ಪಂಚಾಯಿತಿ ಬಾಳಾಜಿ ಕೋಣೆಯಂಡ ಕುಟುಂಬಸ್ಥರ ರಸ್ತೆಗೆ ಕಲ್ಲು ಹಾಕಲು ನೀಡಿರುವ ಎಸ್ಟಿಮೇಟ್ ಕಾಸ್ಟ್ ನ ಧೃಡೀಕೃತ ನಕಲುಗಳ 4 ಪುಟಗಳ ವರದಿಯನ್ನು ಒಟ್ಟಾಗಿ ನಿ ಪಿ 39 ಎಂದು, ರಾಷ್ಟ್ರೀಯ ಗ್ರಾಮೀಣ ಉದ್ಯೋಗ್ಯ ಖಾತ್ರಿ ಯೋಜನೆಯಡಿ ದಿನಾಂಕ 03.07.2009 ರಿಂದ 12.07.2009 ರ ಅವಧಿಯಲ್ಲಿ ತಯಾರಿಸಿದ ಅಕುಶಲ ಕೂಲಿ ಪಾವತಿಗಾಗಿ ತಯಾರಿಸಿದ ಮಸ್ಟರ್ ರೋಲ್ ನ ಧೃಡೀಕೃತ ನಕಲನ್ನು ನಿ ಪಿ 40 ಎಂದು, ದಿನಾಂಕ 29.05.2018 ರಂದು ರಸ್ತೆ ಅಡಚಣೆ ತೆರವು ಸಮಯದಲ್ಲಿ ಮಾಡಿದ ಮಹಜರ್ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು ನಿ ಪಿ 41 ಎಂದು, ದಿನಾಂಕ 29.05.2018 ರಂದು ಪೊಲೀಸರು ನೀಡಿದ ನೊಟೀಸ್ ಅನ್ನು ನಿ ಪಿ 42, ಎರಡು ಫೋಟೋಗಳನ್ನು ನಿ ಪಿ 43 ಮತ್ತು 44 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೇಳಲಾಗಿ ನೀಡಲಾಯಿತು.

ಮರು ವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.